

‘ಕಲಾ ಮಾಧ್ಯಮ’ದ ರೂವಾರಿಗಳಾದ ಕೆ.ಎಸ್. ಪರಮೇಶ್ವರ್ ಮತ್ತು ಸವಿತಾ

‘ಕ್ಲಿಕ್ ಬೈಟ್’ ಎಂದು ಕರೆಯುತ್ತಾರೆ. ಅಂದರೆ ಸುದ್ದಿ ಕ್ಲಿಕ್ ಮಾಡಲೆಂದು ಆಕರ್ಷಕ ಶೀರ್ಷಿಕೆ ಹಾಕಿ ದಾರಿ ತಪ್ಪಿಸುವುದು. ಶೀರ್ಷಿಕೆ ಒಂದಿದ್ದರೆ, ಸುದ್ದಿ ಒಳಗೆ ಹೋದರೆ ವಿಷಯವೇ ಬೇರೆ ಇರುತ್ತದೆ. ಸುಮ್ಮನೆ ದಾರಿ ತಪ್ಪಿಸುವ ಮಾಹಿತಿಗಳೇ ಇರುತ್ತವೆ. ಸ್ವತಃ ಯೂಟ್ಯೂಬ್ ಅಂಥವರನ್ನು ಬ್ಲಾಕ್ ಮಾಡುತ್ತದೆ. ಕೊಡುವ ಮಾಹಿತಿ ಪ್ರಾಮಾಣಿಕವಾಗಿರಬೇಕು. ಹಣ ಮಾಡುವ ಒಂದೇ ಉದ್ದೇಶ ನಿಮ್ಮ ಕೈ ಹಿಡಿಯಲಾರದು. ಈಗ ಸಾಕಷ್ಟು ಜನರು ಯೂಟ್ಯೂಬ್ ಚಾನಲ್‌ಗಳನ್ನು ಸೃಷ್ಟಿಸುತ್ತಿದ್ದಾರೆ. ಕನ್ನಡ ಡಿಜಿಟಲ್ ಲೋಕದಲ್ಲಿ ಹೊಸ ಹೊಸ ಪ್ರಯತ್ನಗಳೂ ಸಾಗುತ್ತಿವೆ.

◆ ಕನ್ನಡದಲ್ಲಿ ಯೂಟ್ಯೂಬ್ ಚಾನಲ್‌ಗಳು ಯಶಸ್ಸು ಗಳಿಸಲು ತೆಗೆದುಕೊಂಡ ಸಮಯ ಅಧಿಕ ಎನಿಸುವುದಿಲ್ಲವೇ?

ಇದು ಎಲ್ಲಾ ಪ್ರಾದೇಶಿಕ ಭಾಷೆಗಳಿಗೂ ಅನ್ವಯಿಸುತ್ತದೆ. ಯೂಟ್ಯೂಬ್ ಬಳಸಲು ಮುಖ್ಯವಾಗಿ ಇಂಟರ್ನೆಟ್ ಇರಬೇಕು. ನಮ್ಮಲ್ಲಿ ಇಂಟರ್ನೆಟ್ ಕ್ರಾಂತಿ ಆರಂಭವಾಗಿದ್ದೇ ತಡವಾಗಿ. ಇಂಟರ್ನೆಟ್ ಇಲ್ಲದೇ ಜನಕ್ಕೆ ವಿಡಿಯೊ ನೋಡಲು ಸಾಧ್ಯವಿರಲಿಲ್ಲ. ಈ ಕಾರಣಕ್ಕೆ ವಿಡಿಯೊ ಮಾಡುವವರಿಗೂ ಆಸಕ್ತಿ ಇರಲಿಲ್ಲ ಎನಿಸುತ್ತದೆ. ಆದರೆ ನಾವು ಯೂಟ್ಯೂಬ್ ಅನ್ನು ಗಂಭೀರವಾಗಿ ಆರಂಭಿಸಲು ಶುರು ಮಾಡಿದಾಗ, ಅಂದರೆ 2020ರಲ್ಲಿ ಇಂಟರ್ನೆಟ್ ಹವಾ ಆರಂಭವಾಗಿತ್ತು. ಇಂಟರ್ನೆಟ್ ಸುಲಭವಾಗಿ ಲಭ್ಯವಾಗುವಂತಾಯಿತು. ಆನಂತರ ಸಾಕಷ್ಟು ಚಾನಲ್‌ಗಳು ಮುನ್ನೆಲೆಗೆ ಬಂದವು. ಹೊಸಬರು, ಹಲವು ಸೆಲೆಬ್ರಿಟಿಗಳು ಕೂಡ ಚಾನಲ್ ಆರಂಭಿಸಿದರು.

◆ ಕಲಾ ಮಾಧ್ಯಮದ ಈ ಪಯಣದಲ್ಲಿ ನಿಮಗೆ ಎದುರಾದ ಸವಾಲುಗಳೇನು?

ಬಹಳ ವೃತ್ತಿಪರವಾಗಿ ಚಾನಲ್ ನಡೆಸುತ್ತಿದ್ದೇವೆ. ಸ್ಥಿರತೆ ಕಾಯ್ದುಕೊಳ್ಳಬೇಕೆಂದು ಪ್ರತಿ ದಿನ ಮೂರು ವಿಡಿಯೊ ಹಾಕುವುದನ್ನು ಕಡ್ಡಾಯ ಮಾಡಿಕೊಂಡಿದ್ದೇವೆ. ಒಂದೊಂದು ವಿಡಿಯೊ ಒಂದೊಂದು ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ. ವೀಕ್ಷಕರನ್ನು ಹಿಡಿದಿಡುವ ಬಹು ಮುಖ್ಯ ಅಂಶವಿದು. ಅಭಿರುಚಿಗೆ ತಕ್ಕಂತೆ ವಿಷಯಗಳ ಹುಡುಕಾಟ ಮುಖ್ಯ. ಮಾಹಿತಿ ಸಂಗ್ರಹಣೆ, ತಪ್ಪುಗಳಾಗದಂತೆ ಉತ್ತಮ ವಿಡಿಯೊ ನೀಡುವುದೇ ಸವಾಲು. ಸದ್ಯ ಚಾನಲ್‌ನಲ್ಲಿ ಏಳೂವರೆ ಲಕ್ಷ ಜನ ಚಂದಾದಾರರಾಗಿದ್ದಾರೆ. ಇದುವರೆಗೂ ಮೂರು ಸಾವಿರ ವಿಡಿಯೊಗಳನ್ನು ಮಾಡಿದ್ದೇವೆ. ಪ್ರತಿ ವಿಡಿಯೊ 20 ನಿಮಿಷ ಇರುತ್ತದೆ. 1000 ಗಂಟೆ ಅವಧಿಯ ನಮ್ಮ ವಿಡಿಯೊಗಳು ಯೂಟ್ಯೂಬ್‌ನಲ್ಲಿವೆ. ಆಟೊ, ಲಾರಿ ಡ್ರೈವರ್‌ಗಳಿಂದ ಹಿಡಿದು ಕಾಲೇಜು ಪ್ರೊಫೆಸರ್, ಐಎಎಸ್ ಅಧಿಕಾರಿಗಳು ಕೂಡ ನಮ್ಮ ವಿಡಿಯೊ ನೋಡುತ್ತಾರೆ. ಎಲ್ಲರ ಮೆಚ್ಚುಗೆ ಗಳಿಸಲು ಮಾಡಬೇಕಾದ ನಿರಂತರ ಪ್ರಯತ್ನವೇ ಸವಾಲು.

◆ ಯೂಟ್ಯೂಬ್ ‘ಕಲಾ ಮಾಧ್ಯಮ’ವನ್ನು ಗುರುತಿಸಿ, ಗೌರವಿಸಿದ ಸಂದರ್ಭ ಹೇಗಿತ್ತು?

2020ರ ಅವಧಿಯಲ್ಲಿ ಇಡೀ ಭಾರತದಲ್ಲಿ ಡೇಟಾ ಕ್ರಾಂತಿ ಶುರುವಾಗಿತ್ತು. ಯೂಟ್ಯೂಬ್‌ಗೆ ಕೆಲವು ಚಾನಲ್‌ಗಳಿಂದ ಹೆಚ್ಚು ಆದಾಯ ಬಂದಿತ್ತು. ಅಂಥ ಯೂಟ್ಯೂಬರ್‌ಗಳಿಗೆ ಗೌರವಾರ್ಥವಾಗಿ ವಾಪಸ್ ಏನು ನೀಡಬಹುದು ಎಂದು ಸಂಸ್ಥೆ ಆಲೋಚನೆ ಮಾಡಿ, ‘ಕ್ರಿಯೇಟಿಂಗ್ ಫಾರ್ ಇಂಡಿಯಾ’ ಎಂಬ ಅಭಿಯಾನ ಆರಂಭಿಸಿತು. ಅಭಿಯಾನದಲ್ಲಿ, ಭಾರತದಲ್ಲಿನ ಪ್ರತಿ ರಾಜ್ಯದಲ್ಲಿಯೂ ಒಬ್ಬರು ಅತ್ಯುತ್ತಮ ಯೂಟ್ಯೂಬರ್ ಅನ್ನು ಗುರುತಿಸಿ ಅವರ ಕುರಿತು ಕಿರುಚಿತ್ರ, ಜಾಹೀರಾತು, ಲೇಖನ, ಪುಸ್ತಕ ಪ್ರಕಟಿಸಲು ನಿರ್ಧರಿಸಿತು. ಕರ್ನಾಟಕದಲ್ಲಿ ‘ಕಲಾ ಮಾಧ್ಯಮ’ ನಂಬರ್ ಒನ್ ಎಂದು ಗುರುತಿಸಿ ಗೌರವ ನೀಡಿತು. ನಮ್ಮ ಪ್ರಯತ್ನಕ್ಕೆ ಒದಗಿಬಂದ ಫಲ ಸಂತೋಷ ನೀಡಿತ್ತು.

◆ ನಿಮ್ಮ ಮುಂದಿನ ಯೋಜನೆಗಳು...

ಸದ್ಯ ಇನ್ನಷ್ಟು ಸಾಧಕರ ಕೆಲಸವನ್ನು ದಾಖಲಿಸುವ ಮನಸ್ಸಿದೆ. ಇಡೀ ಕರ್ನಾಟಕದಲ್ಲಿರುವ ಸಾಧಕರನ್ನು ಪರಿಚಯಿಸಬೇಕು ಎಂಬ ಯೋಜನೆಯಿದೆ. ನಾನು ಮೂಲತಃ ರಂಗಭೂಮಿ ಕಲಾವಿದನಾಗಿರುವುದರಿಂದ ರಂಗಭೂಮಿಗೆ ಸಂಬಂಧಿಸಿದಂತೆ ವೆಬ್ ಸಿರೀಸ್ ಮಾಡುವ ಆಲೋಚನೆಯಿದೆ.

ಪ್ರತಿಕ್ರಿಯಿಸಿ: feedback@sudha.co.in